24	ಕೆಂಪಸಾಗರ	23.00	22.80	ರೈತ ಕಾಯಕ ಕೆರೆ ಯೋಜನೆ ಅಡಿ ಕಾಮಗಾರಿಯನ್ನು ಕೈಗೆತ್ತಿಕೊಂಡು ಪೂರ್ಣಗೊಳಿಸಲಾಗಿದೆ.
25	ಭಗಿನಿ	20.00	–	2008–09ನೇ ಸಾಲಿನ 4702 ಕೆರೆಗಳ ಆಧುನೀಕರಣ ಅಡಿಯಲ್ಲಿ ಕೈಗೊಂಡಿದ್ದು, ಪ್ರಸಕ್ತ ಸಾಲಿನಲ್ಲಿ ಪೂರ್ಣಗೊಳಿಸಲಾಗುವುದು
26	ಮಾಗಡಿ ಗೌರಮ್ಮನಕೆರೆ	–	–	ಮುಂಬರುವ ಸಾಲಿನಲ್ಲಿ ಅನುದಾನದ ಲಭ್ಯತೆ ಮೇರೆಗೆ ಪುನಃಶ್ಚೇತನ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು.
	ಒಟ್ಟು	**442.82**	**360.16**	

847 ಶ್ರೀ ರುದ್ರೇಶಗೌಡ ವೈ.ಎನ್. (ಬೇಲೂರು) : ಮಾನ್ಯ ಸಣ್ಣ ನೀರಾವರಿ, ಯೋಜನಾ ಹಾಗೂ ಸಾಂಖ್ಯಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2008–09ನೇ ಸಾಲಿನ ಶಾಸಕರ ಪ್ರದೇಶಾಭಿವೃದ್ಧಿ ನಿಧಿ ಯೋಜನೆಯಲ್ಲಿ ಬೇಲೂರು ವಿಧಾನಸಭಾ ಕ್ಷೇತ್ರದ ಕಾಮಗಾರಿಗಳ ಪಟ್ಟಿಯನ್ನು ಹಾಸನ ಜಿಲ್ಲಾಧಿಕಾರಿಗಳಿಗೆ ಯಾವ ತಿಂಗಳಲ್ಲಿ ಸಲ್ಲಿಸಲಾಗಿದೆ?

ಆ) ಇದುವರೆವಿಗೂ ಬೇಲೂರು ವಿಧಾನಸಭಾ ಕ್ಷೇತ್ರದಲ್ಲಿ ಶಾಸಕರ ಪ್ರದೇಶಾಭಿವೃದ್ಧಿ ಯೋಜನೆಯಲ್ಲಿ ಎಷ್ಟು ಕಾಮಗಾರಿಗಳು ಪೂರ್ಣಗೊಂಡಿರುತ್ತದೆ? ಎಷ್ಟು ಕಾಮಗಾರಿಗಳಿಗೆ ಹಣ ಸಂದಾಯ ಮಾಡಲಾಗಿದೆ?

ಇ) ಕಾಮಗಾರಿಯು ನಿಧಾನಗತಿಯಲ್ಲಿ ನಡೆಯುತ್ತಿದ್ದುದ್ದಕ್ಕೆ ಕಾರಣಗಳೇನು?

ಈ) ಸಂಪೂರ್ಣವಾದ ಕಾಮಗಾರಿಗೆ ಅರ್ಧ ಹಣ ಬಿಡುಗಡೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಗೋವಿಂದ ಎಂ.ಕಾರಜೋಳ (ಸಣ್ಣ ನೀರಾವರಿ, ಯೋಜನಾ ಹಾಗೂ ಸಾಂಖ್ಯಿಕ ಸಚಿವರು) :

ಅ) ಮಾನ್ಯ ಶಾಸಕರು ದಿನಾಂಕ:30–09–2008ರಂದು 01 ಕಾಮಗಾರಿಗೆ, ದಿನಾಂಕ:04–11–2008ರಂದು 150 ಕಾಮಗಾರಿಗಳಿಗೆ, ದಿನಾಂಕ:24–11–2008ರಂದು ಬದಲಾವಣೆ ಮೇಲೆ 01 ಕಾಮಗಾರಿಗೆ, ದಿನಾಂಕ:04–12–2008ರಂದು ಬದಲಾವಣೆ ಮೇಲೆ 08 ಕಾಮಗಾರಿಗಳಿಗೆ, ದಿನಾಂಕ:29–12–2008ರಂದು 06 ಕಾಮಗಾರಿಗಳಿಗೆ ಮತ್ತು ಆ ದಿವಸವೇ ಬದಲಾವಣೆ ಮೇಲೆ 09 ಕಾಮಗಾರಿಗಳಿಗೆ, ದಿನಾಂಕ:30–12–2008ರಂದು ಬದಲಾವಣೆ ಮೇರೆ 01 ಕಾಮಗಾರಿಗೆ, ದಿನಾಂಕ:12–02–2009ರಂದು 04 ಕಾಮಗಾರಿಗಳಿಗೆ ಮತ್ತು ದಿನಾಂಕ:02–03–2009ರಂದು ಬದಲಾವಣೆ ಮೇರೆ 08 ಕಾಮಗಾರಿಗಳಿಗೆ ಶಿಫಾರಸ್ಸು ಪತ್ರ ನೀಡಿರುತ್ತಾರೆ.

ಆ) ಬೇಲೂರು ಕ್ಷೇತ್ರಕ್ಕೆ ಸಂಬಂಧಿಸಿದಂತೆ ಆಡಳಿತಾತ್ಮಕ ಮಂಜೂರಾತಿ ನೀಡಿರುವ ಕಾಮಗಾರಿಗಳ ಪೈಕಿ 10 ಕಾಮಗಾರಿಗಳು ಪೂರ್ಣಗೊಂಡಿದ್ದು, ಒಟ್ಟು 107 ಕಾಮಗಾರಿಗಳಿಗೆ ಶೇಕಡಾ 50ರಷ್ಟು ಅನುದಾನವಾಗಿ ಒಟ್ಟು ರೂ. 45.025 ಲಕ್ಷ ಅನುದಾನವನ್ನು ಮತ್ತು ಪೂರ್ಣಗೊಂಡ 10 ಕಾಮಗಾರಿಗಳಿಗೆ ಬಾಕಿ ಉಳಿದ ಅನುದಾನವಾಗಿ ರೂ. 4.50 ಲಕ್ಷ ಒಟ್ಟು ರೂ.49.525 ಲಕ್ಷ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

ಇ) ಮಾನ್ಯ ಶಾಸಕರು ಶಿಫಾರಸ್ಸು ಪತ್ರ ಸಲ್ಲಿಸಿದ ಕೂಡಲೇ ಅವರು ಸೂಚಿಸಿದ ಅನುಷ್ಠಾನಾಧಿಕಾರಿಗಳಿಗೆ ವಿಳಂಬವಿಲ್ಲದೆ ಕಾಮಗಾರಿಗಳನ್ನು ಕೈಗೊಳ್ಳುವಂತೆ ಆಡಳಿತಾತ್ಮಕ ಅನುಮೋದನೆ ನೀಡಲಾಗುತ್ತಿದೆ.

ಈ) ಶೇಕಡಾ 50 ರಷ್ಟು ಅನುದಾನವನ್ನು ಕಾಮಗಾರಿಗೆ ಆಡಳಿತಾತ್ಮಕ ಮಂಜೂರಾತಿ ನೀಡುವ ವೇಳೆಯಲ್ಲಿ ಬಿಡುಗಡೆ ಮಾಡಲಾಗುತ್ತಿದೆ. ಕಾಮಗಾರಿಯ ಕೆಲಸ ಪೂರ್ಣಗೊಂಡ ನಂತರ ವರದಿ ಬಂದಕೂಡಲೇ ಉಳಿಕೆ ಅನುದಾನವನ್ನು ಬಿಡುಗಡೆ ಮಾಡಲಾಗುತ್ತಿದೆ.

529 ಶ್ರೀ ಅಪ್ಪಾಜಿ @ ಚನ್ನಬಸವರಾಜ್ ಶಂಕರ್‌ರಾವ್ ನಾಡಗೌಡ : ಮಾನ್ಯ ಸಣ್ಣ ಕೈಗಾರಿಕೆಗಳು ಮತ್ತು ರೇಷ್ಮೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಡಾ॥ ಡಿ.ಎಂ.ನಂಜುಂಡಪ್ಪನವರ ವರದಿ ಆಧಾರದ ಮೇಲೆ ಅತಿ ಹಿಂದುಳಿದ ಪ್ರದೇಶಗಳಲ್ಲಿ ಯಾವ ರೀತಿಯ ಸಣ್ಣ ಕೈಗಾರಿಕೆಗಳನ್ನು